ಎನ್ನುವ ವಿಶಾಲ ಮನೋಭಾವ ಗುರುರಾಜ್ ಅವರನ್ನು ಕಲಾಕ್ಷೇತ್ರದಲ್ಲಿ ಮತ್ತಷ್ಟು ಬೆಳಗುವಂತೆ ಮಾಡಿದೆ.

ಸಾಫ್ಟ್‌ವೇರ್ ಎಂಜಿನಿಯರ್ ವೃತ್ತಿಯ ಜೊತೆಗೆ ಭರತನಾಟ್ಯವನ್ನು ಕಳೆದ ಹದಿನೇಳು ವರ್ಷಗಳಿಂದ ಪ್ರವೃತ್ತಿಯಾಗಿ ರೂಢಿಸಿಕೊಂಡಿದ್ದು, ಈಗಾಗಲೇ ದೇಶದಾದ್ಯಂತ ಹಲವಾರು ನೃತ್ಯ ಪ್ರದರ್ಶನಗಳನ್ನು ನೀಡಿದ್ದಾರೆ. ಕರ್ನಾಟಕ ಪ್ರೌಢಶಿಕ್ಷಣ ಮಂಡಳಿ ನಡೆಸುವ ರಾಜ್ಯಮಟ್ಟದ ಭರತನಾಟ್ಯ ವಿದ್ವತ್ ಪರೀಕ್ಷೆಯಲ್ಲಿ ಪ್ರಥಮ ರ್‍ಯಾಂಕ್ ಗಳಿಸಿದ್ದಾರೆ. ಮುಂಬಯಿಯ ಗಂಧರ್ವ ಮಹಾವಿದ್ಯಾಲಯ ನಡೆಸುವ ವಿಶಾರದ ಪರೀಕ್ಷೆಯಲ್ಲೂ ಅತ್ಯುತ್ತಮ ಅಂಕ ಗಳಿಸಿದ್ದಾರೆ. ದೂರದರ್ಶನದ 'ಬಿ' ಗ್ರೇಡ್ ಕಲಾವಿದರಾಗಿದ್ದು, ಸುಮಾರು 40 ಮಕ್ಕಳಿಗೆ ನೃತ್ಯ ತರಬೇತಿಯನ್ನೂ ನೀಡುತ್ತಿದ್ದಾರೆ. 20 ಮಕ್ಕಳು ಈಗಾಗಲೇ ಕಾರ್ಯಕ್ರಮ ಕೊಡುವಷ್ಟರಮಟ್ಟಿಗೆ ತಯಾರಾಗಿದ್ದರೆ ಇಬ್ಬರು ಪ್ರಿವಿದ್ವತ್ ಹಾಗೂ ಎಂಟು ಮಕ್ಕಳು ಸೀನಿಯರ್ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿ ಪಾಸಾಗಿದ್ದಾರೆ. ಮನೆಯ ಪಕ್ಕದಲ್ಲಿರುವ ಸರ್ಕಾರಿ ಶಾಲೆಯ ಆಸಕ್ತ 25 ಮಕ್ಕಳಿಗೆ ಉಚಿತವಾಗಿ ನೃತ್ಯ ಹೇಳಿಕೊಡುತ್ತಿದ್ದಾರೆ.

ಮೈಸೂರು ದಸರಾ, ಮಂತ್ರಾಲಯ, ಹೊರನಾಡು, ಕಟೀಲು ಮುಂತಾದ ಕಡೆಗಳಲ್ಲಿ ನೃತ್ಯ ಪ್ರದರ್ಶನ ನೀಡಿ ಪ್ರೇಕ್ಷಕರಿಂದ ಮೆಚ್ಚುಗೆ ಗಳಿಸಿದ್ದಾರೆ.

## ಸನ್ನಿವೇಶಕ್ಕೆ ತಕ್ಕಂತೆ ನಾಟ್ಯ

ಸಾಮಾನ್ಯವಾಗಿ ಭರತನಾಟ್ಯ ಕಲಾವಿದರು ಶಾಸ್ತ್ರೀಯ ನೃತ್ಯದಲ್ಲಿ ಅಲರಿಪು, ವರ್ಣ, ಕೃತಿ, ಕೀರ್ತನೆಗಳನ್ನು ಪ್ರಸ್ತುತಪಡಿಸುತ್ತಾರೆ. ಗುರುರಾಜ್ ಆಯಾಯ ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಭರತನಾಟ್ಯದ ವಿವಿಧ ಆಯಾಮಗಳನ್ನು ಪ್ರಸ್ತುತಪಡಿಸುತ್ತಾರೆ. ದೇವಾಲಯದ ವೇದಿಕೆಯಲ್ಲಿ ನೃತ್ಯ ಮಾಡುವುದಾದರೆ ಆಯಾಯ ದೇವರಿಗೆ ಸಂಬಂಧಿಸಿದ ನೃತ್ಯವನ್ನೇ ಮಾಡುತ್ತಾರೆ. ಕೊಲ್ಲೂರು, ಹೊರನಾಡುಗಳಲ್ಲಿ ದೇವಿಗೆ ಸಂಬಂಧಿಸಿದ ಕೃತಿ, ಕೀರ್ತನೆಗಳ ಅನಾವರಣ ನಡೆಯುತ್ತದೆ, ಕೃಷ್ಣನ ದೇವಸ್ಥಾನದಲ್ಲಿ ಕೃಷ್ಣನದ್ದೇ ನಾಟ್ಯ. ಥೀಮ್ ಓರಿಯಂಟೆಡ್ ನೃತ್ಯ ಮಾಡುವುದರಲ್ಲಿಯೂ ಗುರುರಾಜ್ ಎತ್ತಿದಕೈ. ವರ್ಣ, ಕೀರ್ತನೆ, ತಿಲ್ಲಾನ, ಜತಿಸ್ವರ ಇವೆಲ್ಲವನ್ನೂ ನೃತ್ಯದ ಭಾಗವಾಗಿ ಮಾಡುತ್ತಿದ್ದರೂ ತತ್ವಾಧಾರಿತ ನೃತ್ಯ ಗುರುರಾಜ್ ಅವರ ಮೆಚ್ಚು.

ಸನ್ನಿವೇಶ, ಸಂದರ್ಭಕ್ಕೆ ತಕ್ಕಂತೆ ನೃತ್ಯಗಳಿಗೆ ಅಣಿಯಾಗುವ ಗುರುರಾಜ್ ಸ್ಪೆಷಾಲಿಟಿಗೆ ಒಂದು ನಿದರ್ಶನವೆಂದರೆ ಅದು ಕೆಲವರ್ಷಗಳ ಹಿಂದೆ ಬೆಂಗಳೂರಿನ ಇಸ್ಕಾನ್‌ನಲ್ಲಿ ನಡೆದ 'ಹೆರಿಟೇಜ್ ಫೆಸ್ಟ್'. ಹೇಳಿ ಕೇಳಿ ಇಸ್ಕಾನ್ ಕೃಷ್ಣನ ಸನ್ನಿಧಿ. ಅಲ್ಲಿ ನೃತ್ಯ ಮಾಡಲು ಗುರುರಾಜ್ ಆಯ್ದುಕೊಂಡದ್ದು ಸಂಗೀತ ಪಿತಾಮಹ ಪುರಂದರದಾಸರು ರಚಿಸಿದ ಸುಪ್ರಸಿದ್ಧ ಕೃತಿ ಆರಭಿ ರಾಗ, ಆದಿತಾಳದ–

'ಆಡಿದನೋ ರಂಗ ಅದ್ಭುತದಿಂದಲಿ;
ಕಾಳಿಂಗನ ಫಣೆಯಲಿ
ಪಾಡಿದವರಿಗೆ ಬೇಡಿದ ವರಗಳ ನೀಡುತಲಿ
ದಯ ಮಾಡುತಲಿ
ನಲಿದಾಡುತಲಿ ಬೆಣ್ಣೆ ಬೇಡುತಲಿ ಕೃಷ್ಣ...'

ಈ ವಿಶಿಷ್ಟ ಸಾಹಿತ್ಯವಿರುವ ದೇವರನಾಮದಲ್ಲಿ ಕಾಳಿಂಗ ನರ್ತನ ಮಾಡಿದ ಶ್ರೀಕೃಷ್ಣನ ವರ್ಣನೆಯಿದೆ. ಜೊತೆಗೆ ಭರತ ಮುನಿಯ ನಾಟ್ಯಶಾಸ್ತ್ರದಲ್ಲಿರುವ ವಿವರಣೆಯಂತೆಯೇ ಈ ಹಾಡಿನಲ್ಲೂ ಭರತನಾಟ್ಯದ ವರ್ಣನೆಯನ್ನು ಪುರಂದರದಾಸರು ರಸವತ್ತಾಗಿ ಮಾಡಿದ್ದಾರೆ. ಹೀಗಾಗಿ ಈ ಹಾಡು ಕೃಷ್ಣನ ಸನ್ನಿಧಿಯಲ್ಲಿ ಅತ್ಯಂತ ಪ್ರಸ್ತುತವೆನಿಸುತ್ತದೆ. ಇಸ್ಕಾನ್‌ನಲ್ಲಿ ಗುರುರಾಜ್ ಈ ಹಾಡನ್ನು ನಾಟ್ಯದಲ್ಲಿ ಅಭಿನಯಿಸಿದ್ದು ಕೂಡ ಅತ್ಯಂತ ವಿಶಿಷ್ಟವಾಗಿತ್ತು.

## ನಾಟ್ಯದ ಜತೆಗೆ ಮೃದಂಗವೂ...

ಸಾಮಾನ್ಯವಾಗಿ ಹುಡುಗರು ನೃತ್ಯ ಅಭ್ಯಾಸ ಮಾಡುವುದಿಲ್ಲ. ನಾಟ್ಯ ಏನಿದ್ದರೂ ಹೆಣ್ಣುಮಕ್ಕಳಿಗೆ ತಕ್ಕುದಾದದ್ದು ಎಂದು ಅನೇಕರು ಭಾವಿಸುವುದುಂಟು. ಆದರೆ ಮೂಲತಃ ಮೈಸೂರಿನವರಾದ ಕಲಾಪೋಷಕ ನಾಗೇಂದ್ರ ಹಾಗೂ ಸುಮಾ ನಾಗೇಂದ್ರ ಪುಟ್ಟ ಹುಡುಗನಲ್ಲಿ ನೃತ್ಯ ಪ್ರತಿಭೆಯನ್ನು ಗಮನಿಸಿ ಮೊದಲಿಗೆ ವಿದುಷಿ ಸೀತಾ ಗುರುಪ್ರಸಾದ್ ಅವರಲ್ಲಿ ನೃತ್ಯ ಕಲಿಯಲು ಸೇರಿಸಿದರು. ಹೆಚ್ಚಿನ ಅಭ್ಯಾಸವನ್ನು ವಿದುಷಿ ಬೃಂದಾ ಅವರಲ್ಲಿ ಮಾಡಿದರು. ನೃತ್ಯದ ಜೊತೆಗೆ ಮೃದಂಗವನ್ನು ವಿದ್ವಾನ್ ವಿ.ಆರ್. ಚಂದ್ರಶೇಖರ್ ಅವರಲ್ಲಿ ಕಳೆದ ಮೂರು ವರ್ಷಗಳಿಂದ ಕಲಿಯುತ್ತಿರುವ ಗುರುರಾಜ್ ಮೃದು ಸ್ವಭಾವದ ಯುವಕಲಾವಿದ.

ಸದ್ಯ ಗುರುರಾಜ್ ನೃತ್ಯದ ಹೆಜ್ಜೆ ಹೆಜ್ಜೆಗಳಲ್ಲೂ ಸಾಂಪ್ರದಾಯಿಕ 'ನಡೆ', ಅಡವು ಅಲರಿಪುಗಳಲ್ಲಿ ಅಡೆತಡೆಗಳಿಲ್ಲದಷ್ಟು ಸ್ಪಷ್ಟತೆ, ಅಭಿನಯದ 'ಮುದ್ರೆ', ಕಷ್ಟದ ಚಲನೆಗಳ ಅಭಿವ್ಯಕ್ತಿ, ನಟುವಾಂಗ, ಮೃದಂಗಗಳಿಂದ ಹೊಮ್ಮುವ ನಾದ, ಲಯಗಳಿಗೆ ಅನುಗುಣವಾಗಿ ಚಮತ್ಕಾರಿಕವಾಗಿ ಹೆಜ್ಜೆ ಹಾಕುವ ವಿಶಿಷ್ಟ ಶೈಲಿಯಿಂದ ಜನಮೆಚ್ಚುಗೆ ಗಳಿಸಿದ್ದಾರೆ.

## ನೋವಿನ ಎಳೆ

ಭರತನಾಟ್ಯದಲ್ಲಿ ಎತ್ತರೆತ್ತರಕ್ಕೆ ಏರುತ್ತಿದ್ದಂತೆ ಬದುಕಿನಲ್ಲಿ ನೋವಿನ ಎಳೆಯೊಂದು ಧುತ್ತೆಂದು ಬಂದೆರಗಿದ್ದು ಗುರುರಾಜ್ ಪಾಲಿನ ದುರಂತ. ಮೂರು ವರ್ಷಗಳ ಹಿಂದೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಭರತನಾಟ್ಯದ ಅಧಿಕೃತ ರಂಗಪ್ರವೇಶದ ಅರಂಗೇಟ್ರಂ ನಿಗದಿಯಾಗಿತ್ತು. ಇದಕ್ಕಾಗಿ ಹಿಂದಿನ ದಿನ ಗುರುವಿನ ಸಮ್ಮುಖದಲ್ಲಿ ಅಭ್ಯಾಸ ನಡೆಸಿ ವಾಪಸಾಗುವ ವೇಳೆ ಟ್ರಾಫಿಕ್ ಸಿಗ್ನಲ್ ಬಳಿಯೇ ಬೈಕ್ ಅಪಘಾತ ನಡೆದುಹೋಗಿತ್ತು. ಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾದ ಗುರುರಾಜ್ ಎರಡು ವರ್ಷ ನೃತ್ಯ ಮಾಡಲಾಗದೇ ಚಡಪಡಿಸಬೇಕಾಯಿತು. ಆದರೆ ಗುರುರಾಜ್ ಈಗ ಸಂಪೂರ್ಣ ಗುಣಮುಖರಾಗಿದ್ದು, ಮತ್ತೆ ಭರತನಾಟ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇತ್ತೀಚೆಗೆ ಗುರುವಾಯೂರಿನ ಕೃಷ್ಣನ ಸನ್ನಿಧಿಯಲ್ಲಿ ಭರತನಾಟ್ಯ ಪ್ರದರ್ಶನ ನೀಡಿ ಪ್ರಶಂಸೆಯ ಸುರಿಮಳೆಯನ್ನೂ ಗಿಟ್ಟಿಸಿಕೊಂಡಿದ್ದಾರೆ.

'ಅಂದು ಗಂಗೂಬಾಯಿ ಹಾನಗಲ್ ಅವರ ಪ್ರೋತ್ಸಾಹದಾಯಕ ಮಾತುಗಳು ಇಂದಿಗೂ ಸದಾ ನನ್ನ ಕಿವಿಯಲ್ಲಿ ರಿಂಗಣಿಸುತ್ತಿರುತ್ತದೆ. ಅದೇ ಸ್ಫೂರ್ತಿಯಲ್ಲಿ ನೃತ್ಯಕ್ಕೆ ಹೆಚ್ಚಿನ ಗಮನ ನೀಡುವುದಲ್ಲದೆ ಆಸಕ್ತ ಮಕ್ಕಳನ್ನೂ ಈ ಕಲೆಯಲ್ಲಿ ಪಳಗಿಸುತ್ತಿದ್ದೇನೆ' ಎನ್ನುತ್ತಾರೆ ಗುರುರಾಜ್.

ಭರತನಾಟ್ಯದಲ್ಲಿ ಬಡ ಮಕ್ಕಳನ್ನು ಬೆಳೆಸುವ ಇರಾದೆ ಈ ಕಲಾವಿದನಿಗಿದೆ. ಮತ್ತಷ್ಟು ಮೇಲೇರುವಾಸೆಯನ್ನೂ ಮನದಲ್ಲೇ ತುಂಬಿಕೊಂಡಿರುವ ಗುರುರಾಜ್‌ಗೆ ಭರತನಾಟ್ಯದಲ್ಲಿ ಉಜ್ವಲ ಭವಿಷ್ಯವೂ ಇದೆ. ■



## ಮುಡಿಯಲ್ಲಿ ಪ್ರಶಸ್ತಿಗಳು

ಆರ್ಯಭಟ ಪ್ರಶಸ್ತಿ, ಕನ್ನಡ ಕಣ್ಮಣಿ ಪ್ರಶಸ್ತಿ, ಕೇಂದ್ರ ಸರ್ಕಾರದ ಯೂತ್ ಅಫೇರ್ಸ್ ಮಿನಿಸ್ಟ್ರಿ ನಡೆಸುವ ನೆಹರು ಯುವಕೇಂದ್ರದಿಂದ ಸದ್ಭಾವನಾ ಪ್ರಶಸ್ತಿ, ಬೆಳೆವ ಸಿರಿ ಪ್ರಶಸ್ತಿ, ಡಾ. ರಾಜಕುಮಾರ್ ಸುವರ್ಣ ಕರ್ನಾಟಕ ಪ್ರಶಸ್ತಿ, ಅರಳು ಮಲ್ಲಿಗೆ ಪ್ರಶಸ್ತಿ, ಸುವರ್ಣ ಕರ್ನಾಟಕ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಬಾಲ್ಯಚೇತನ ಪ್ರಶಸ್ತಿ, ಭಾರತ ಯುವಕಕೇಂದ್ರದಿಂದ ಎಂ.ಎನ್.ವೆಂಕಟಾಚಲಯ್ಯ ಅವರು ನೀಡಿದ ಬಾಲ್ಯರತ್ನ ಪ್ರಶಸ್ತಿ ಮುಂತಾದವು ಗುರುರಾಜ್ ಮುಡಿಗೇರಿವೆ.